ದಿನಾಂಕಃ 12-10-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ **1, 2, 7** ರಿಂದ **9** ಪ್ರತಿವಾದಿ ಪರ ವಕೀಲರಿಂದ

ನನ್ನ ತಾಯಿಯ ತಮ್ಮ ರಾಯಚೂರಿನಲ್ಲಿ ಇರುತ್ತಾರೆ ಎಂದರೆ ಸರಿ. ಆತನ ಹೆಸರು ಉರ್ಶಿದ್ ಹುಸೇನ್ ಎಂದರೆ ಸರಿ. ನನ್ನ ಇಂಟರ್ ಶಿಪ್ ತರಬೇತಿ 1987-88 ನೇ ಸಾಲಿನಲ್ಲಿ ಮುಗಿದಿದೆ ಎಂದರೆ ಸರಿ. ಆದಾದನಂತರ ನಾನುಬಿ.ಎ. ಪದವಿ ಓದಲು ರಾಯಚೂರಿಗೆ ಹೋಗಿದ್ದೆ ಎಂದರೆ ಸರಿ. ಆದರೆ ಆಗಾಗ ಬಂದು ಹೋಗುತ್ತಿದ್ದೆ. ನಾನು ಬಿ.ಎ. ಓದುವಾಗ ನನ್ನ ಸೋದರಮಾವನ ಮನೆಯಲ್ಲಿ ಇರುತ್ತಿದ್ದೆ ಎಂದರೆ ಸರಿ. ಬಿ.ಎ. ಪದವಿಯನ್ನು 1990 ರಿಂದ 1992 ರವರೆಗೆ ಮುಗಿಸಿದ್ದೇನೆ. ಆ ಅವಧಿಯಲ್ಲಿ ನಾನು ಯಾವುದೇ ಮನೆ ಪಾಠ ಹೇಳುತ್ತಿರಲಿಲ್ಲ ಎಂದರೆ ಸರಿ ಅಲ್ಲ.

ನನ್ನ ತಂದೆಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. (ಸಾಕ್ಷಿಗೆ ದಿನಾಂಕ ನಮೂದಿಸದ ಒಂದು ನೋಂದಾಯಿತವಲ್ಲದ ರೂ.5 ಛಾಪಾ ಕಾಗದದ ಮೇಲೆ ಬರೆದ ಒಂದು ಪ್ಲಾಟಿನ ಖರೀದಿ ಕರಾರು ಪತ್ರ ಎಂದು ಹೇಳಲಾದ ದಾಖಲೆಯನ್ನು ತೋರಿಸಿ ಅದರಲ್ಲಿರುವ 1 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ, ಆದರೆ ಸದರಿ ದಾಖಲೆಯು ನೋಂದಾಯಿತವಲ್ಲದ ಮತ್ತು ಕೊರತೆ ಮುದ್ರಾಂಶ ಶುಲ್ಕ ಇರುವುದರಿಂದ ಅದನ್ನು ಇಂಪೌಂಡ್ ಮಾಡಿಕೊಂಡು ನಿಶಾನೆಯಾಗಿ ಗುರುತಿಸಿರುವುದಿಲ್ಲ).

ನಾರಾಯಣಪ್ಪರವರ ಕಡೆಯಿಂದ ರೂ.8,000/- ಗಳಿಗೆ ಈ ನಿವೇಶನ ಖರೀದಿಸಲಾಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ನಮ್ಮ ತಂದೆ, ನಾರಾಯಣಪ್ಪ, ಬಿ.ವಿ. ಪುರಾಣಿಕ ಮತ್ತು ಅಬ್ದುಲ್ ರವರ ಸಮಕ್ಷಮದಲ್ಲಿ ಮಾತುಕತೆ ಆಗಿತ್ತು ಎಂದರೆ ಸರಿ ಅಲ್ಲ. ಆ ಮಾತುಕತೆಯಲ್ಲಿ 1 ನೇ ಪ್ರತಿವಾದಿ ಮುಂಗಡವಾಗಿ ದಿಃ 23-08-1988 ರಂದು ರೂ.5,000/- ಗಳನ್ನು ನಾರಾಯಣಪ್ಪರವರಿಗೆ ನೀಡಿದ್ದರೂ ಎಂದರೆ ನನಗೆ ಗೊತ್ತಿಲ್ಲ, ನಾನು ಮನೆಯಲ್ಲಿ ನಮ್ಮ ತಂದೆಗೆ ಹಣ ನೀಡಿದ್ದೆ. ಉಳಿದ ರೂ.3,000/- ಹಣವನ್ನು ಎರಡು ವರ್ಷದ ಒಳಗೆ ಕೊಟ್ಟು ಖರೀದಿ ಮಾಡಿಕೊಳ್ಳಬೇಕು ಎಂದು ಮಾತುಕತೆ ಆಗಿತ್ತು ಎಂದರೆ ಸರಿ ಅಲ್ಲ. ಆ ದಾಖಲೆ ಸುಳ್ಳು ಇದೆ. ಆ ದಾಖಲೆ ಸುಳ್ಳು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಇದ್ದಾಗಲೇ ಆ ಕ್ರಯದ ಕರಾರು ಪತ್ರವನ್ನು ತಯಾರಿಸಲಾಗಿದೆ ಎಂದರೆ ಸರಿ ಅಲ್ಲ. ನಾನು ನಮ್ಮ ತಂದೆಗೆ ಹಣ ಕೊಟ್ಟಿದ್ದೇನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಮುಂದುವರೆದ ಪಾಟೀ ಸವಾಲು ಃ **10** ನೇ ಪ್ರತಿವಾದಿ ಪರ ವಕೀಲರಿಂದ</u>

1, 2, 7 ರಿಂದ 9 ಪ್ರತಿವಾದಿಯರ ಪಾಟೀಸವಾಲನ್ನು ಅಳವಡಿಸಿಕೊಂಡಿದ್ದಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.